ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸರ್ಕಾರಿ ಜಮೀನುಗಳಾಗಿರುವುದಿಲ್ಲ. ಆದ್ದರಿಂದ ಮುಟ್ಟುಗೋಲು ಹಾಕಲು ಪ್ರಶ್ನೆ ಉದ್ಭವಿಸುವುದಿಲ್ಲ.

ಕೊರಟಗೆರೆ ಕ್ಷೇತ್ರದ ಬರಪರಿಹಾರ ಅನುದಾನದ ಸದುಪಯೋಗ

1757 (1368) ಶ್ರೀ ಚನ್ನಿಗಪ್ಪ .ಸಿ (ಕೊರಟಗೆರೆ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ಕ್ಷೇತ್ರ ವ್ಯಾಪ್ತಿಗೆ ಬರಪರಿಹಾರ ಕಾಮಗಾರಿಯಡಿಯಲ್ಲಿ ಮಂಜೂರಾಗಿರುವ ಅನುದಾನ ಎಷ್ಟು ವಿವರವಾರು ಒದಗಿಸುವುದು;

ಆ) ಬರಪರಿಹಾರ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನವನ್ನು ವಿನಿಯೋಗಿಸುವಂತೆ ಕೊಟ್ಟ ಶಾಸಕರ ಪತ್ರಗಳಿಗೆ ಯಾವುದೇ ಮಾನ್ಯತೆ ನೀಡದೇ 4 ತಿಂಗಳಿನಿಂದಲೂ ಕಡೆಗಣಿಸಿ ರೈತರ ಹಿತವನ್ನು ಕಾಪಾಡಲು ಕಡೆಗಣಿಸಿದ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು;

ಇ) ಬರಪರಿಹಾರ ಯೋಜನೆಯಡಿಯಲ್ಲಿ ಈಗಾಗಲೇ ಯಾವ ಯಾವ ಕಾಮಗಾರಿಗಳನ್ನು ಪೂರೈಸಲಾಗಿದೆ.

ಈ) ಎಲ್ಲಾ ತಾಲ್ಲೂಕುಗಳಲ್ಲಿ ಟಾಸ್ಕಫೋರ್ಸ್ ಸಭೆಗಳನ್ನು ಎಷ್ಟು ತಿಂಗಳಿಗೊಮ್ಮೆ ನಡೆಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ತುಮಕೂರು ಜಿಲ್ಲಾಧಿಕಾರಿಯವರು ಕೊರಟಗೆರೆ ಕ್ಷೇತ್ರಕ್ಕೆ ಬರ ಪರಿಹಾರಕ್ಕಾಗಿ ರೂ. 45.16 ಲಕ್ಷ ಅನುದಾನ ಹಾಗೂ 682.61 ಟನ್ ಆಹಾರಧಾನ್ಯ ಬಿಡುಗಡೆ ಮಾಡಿರುತ್ತಾರೆ.

ಆ) ಬರ ಪರಿಹಾರ ಕಾಮಗಾರಿಗಳನ್ನು ಸ್ಥಳೀಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿರುವ ತಾಲ್ಲೂಕು ಮಟ್ಟದ ಬರ ಉಸ್ತುವಾರಿ ಸಮಿತಿಯಲ್ಲಿ ಪರಿಶೀಲಿಸಿ ನಿರ್ಣಯ ತೆಗೆದು ಕೊಳ್ಳಲಾಗುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈಗಾಗಲೇ ಕಟ್ಟೆ ಅಭಿವೃದ್ಧಿ, ಕೆರೆ ಅಂಗಳದಲ್ಲಿ ಹೊಂಡ ನಿರ್ಮಾಣ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ ಕಾಮಗಾರಿಗಳನ್ನು ಪೂರೈಸಲಾಗಿದೆ. ಕೆರೆ ನಿರ್ಮಾಣಗಳು ಪ್ರಗತಿಯಲ್ಲಿವೆ.

ಈ) ಪ್ರತಿ ತಿಂಗಳಿಗೊಮ್ಮೆ ನಡೆಸಲಾಗುವುದು.

ರಾಜ್ಯದಲ್ಲಿರುವ ಕ್ರೀಡಾಂಗಣಗಳ ನಿರ್ಮಾಣ

1758 (1938) ಶ್ರೀ ಚನ್ನಿಗಪ್ಪ. ಸಿ. (ಕೊರಟಗೆರೆ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು? (ವಿವರವಾರು ಒದಗಿಸುವುದು)

ಆ) ಈ ಕ್ರೀಡಾಂಗಣಗಳ ನಿರ್ಮಾಣಕ್ಕೆ ಹಾಗೂ ದುರಸ್ತಿ ಕಾರ್ಯಕ್ಕೆ ಯಾವ ಯಾವ ಯೋಜನೆಯ ಮತಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆ?

ಇ) ನಿರ್ಮಾಣ ಕಾರ್ಯಕ್ಕೆ ಹಾಗೂ ದುರಸ್ತಿ ಕಾರ್ಯಕ್ಕೆ ಎಷ್ಟು ಅನುದಾನವನ್ನು ಕಳೆದ ಮೂರು ವರ್ಷಗಳ ಹಿಂದಿನಿಂದಲೂ ಬಿಡುಗಡೆ ಮಾಡಲಾಗಿದೆ?

ಈ) ಕಾಮಗಾರಿ ನಡೆಯುತ್ತಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು? ವಿಳಂಬವಾಗಲು ಕಾರಣವೇನು?

ಉ) ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರೈಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಿಕೊಡುವುದು ಯಾವಾಗ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) 134. (ಪೂರ್ಣಗೊಂಡಿರುವ 21 ಜಿಲ್ಲಾ ಕ್ರೀಡಾಂಗಣಗಳು, 5 ತಾಲ್ಲೂಕು ಕ್ರೀಡಾಂಗಣಗಳು ಮತ್ತು ಒಳಾಂಗಣ ಕ್ರೀಡಾಂಗಣಗಳ ಸಹಿತ).
ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಕೇಂದ್ರ ಸರ್ಕಾರದ ಅನುದಾನ, ರಾಜ್ಯವಲಯ ಯೋಜನೆ, ಜಿಲ್ಲಾ ಪಂಚಾಯತ್ ಯೋಜನೆ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ, ಮಲೆನಾಡು ಗಡಿಪ್ರದೇಶ ಮಂಡಲಿ, ಸಂಸದರ ನಿಧಿ ಶಾಸಕರ ನಿಧಿ.

ಇ) 1186.15 ಲಕ್ಷ ರೂ.ಗಳು

ಈ) ಅನುದಾನದ ಕೊರತೆ ನಿವೇಶನಗಳ ತಕರಾರುಗಳಿಂದ ವಿಳಂಬವಾಗಿದೆ.

ಉ) ಆವಶ್ಯಕ ಅನುದಾನ ಕ್ರೋಢೀಕರಿಸಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ತಕ್ಷಣ.

ಅನುಬಂಧ

ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆಗಳ ವಿವರ

1.	ಗುಲ್ಬರ್ಗಾ	6
2.	ಕೊಪ್ಪಳ	3
3.	ಬೀದರ್	5
4.	ಬಳ್ಳಾರಿ	4
5.	ರಾಯಚೂರು	3
6.	ಬೆಳಗಾಂ	8
7.	ಬಾಗಲಕೋಟೆ	4
8.	ಹಾವೇರಿ	5
9.	ಉತ್ತರ ಕನ್ನಡ	8
10.	ಧಾರವಾಡ	1
11.	ಬಿಜಾಪುರ	1
12.	ಮೈಸೂರು	6
13.	ಮಂಡ್ಯ	5
14.	ಕೊಡಗು	4
15.	ಚಿಕ್ಕಮಗಳೂರು	5
16.	ಹಾಸನ	7

17.	ದಕ್ಷಿಣ ಕನ್ನಡ	5
18.	ಉಡುಪಿ	3
19.	ಚಾಮರಾಜನಗರ	4
20.	ಬೆಂಗಳೂರು ಗ್ರಾಮಾಂತರ	6
21.	ಬೆಂಗಳೂರು ನಗರ	5
22.	ದಾವಣಗೆರೆ	4
23.	ಶಿವಮೊಗ್ಗ	7
24.	ಚಿತ್ರದುರ್ಗ	6
25.	ಕೋಲಾರ	11
26.	ತುಮಕೂರು	5
27.	ಗದಗ್	3
	ಒಟ್ಟು	134

ಚಿಂತಾಮಣಿ ತಾಲ್ಲೂಕಿನ ಶ್ರೀ ಖಾದ್ರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯ

1760 (1371) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಅಂಬಜಿದುರ್ಗ ಹೋಬಳಿ ಸಿಂಗ್ರೇಪಲ್ಲಿ ಶ್ರೀ ಖಾದ್ರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಈ ದೇವಸ್ಥಾನಕ್ಕೆ ಎಷ್ಟು ಎಕರೆ ಸ್ಥಿರಾಸ್ತಿ ಇದೆ ಎಂಬುದನ್ನು ವಿವರವಾಗಿ ತಿಳಿಸುವಿರಾ;

ಆ) ಈ ದೇವಸ್ಥಾನಕ್ಕೆ ಸೇರಿದ ಜಮೀನಿನಲ್ಲಿ ಮಾಲಕಿ ಮತ್ತು ಇತ್ಯಾದಿ ಎಷ್ಟಿದೆ ಹಾಗೂ ಎಷ್ಟು ಹಣ ಬೆಲೆ ಬಾಳುತ್ತದೆ ಎಂಬುದನ್ನು ತಿಳಿಸುವಿರಾ;

ಇ) ಈ ದೇವಸ್ಥಾನಕ್ಕೆ ಸೇರಿದ ಕೆಲವು ಮರಗಳನ್ನು ಖಾಸಗಿಯವರು ಹೊಡೆದು ಮಾಡಿಕೊಂಡು ಹಣ ಮಾಡುತ್ತಿರುವುದು ಮತ್ತು ಕೆಲವು ಹುಣಸೆ ಮರಗಳಲ್ಲಿ ಫಸಲನ್ನು ರೂಡಿಸಿಕೊಂಡು ಹಣ ಗಳಿಸುತ್ತಿರುವುದು, ಈ ಕೃತ್ಯಗಳಿಂದ ದೇವಾಲಯ ಕೈ ಆಗುತ್ತಿರುವ ನಷ್ಟದ ಬಗ್ಗೆ ಸರ್ಕಾರದ ಏನು ಕ್ರಮ ಕೈಗೊಳ್ಳುತ್ತದೆ ತಿಳಿಸುವಿರಾ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಚಿಂತಾಮಣಿ ತಾಲ್ಲೂಕು ಅಂಬಜಿದುರ್ಗ ಹೋಬಳಿ ಸಿಂಗ್ರಪಲ್ಲಿ ಶ್ರೀ ಖಾದ್ರಿ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ವಿಸ್ತೀರ್ಣದ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ.ಗು.
1.	ಕೆ.ರಾ. ಗುಟ್ಟಹಳ್ಳಿ	3	1.08
2.	"	44	0.15
3.	"	38	0.36
4.	"	43	0.26